ಆ) ಸದರಿ ಶಾಲೆಯು ತೀರಾ ಚಿಕ್ಕದಾಗಿದ್ದು ಸ್ಥಳದ ಅಭಾವ ಇರುವುದು ನಿಜವೇ ?

ಇ) ಸದರಿ ಪ್ರೌಢಶಾಲೆಗಾಗಿ ಮಂಜೂರಾಗಿರುವ ಕಟ್ಟಡವನ್ನು ಮೂಲ ನಕ್ಷೆಯಂ ಪ್ರಕಾರ ಪೂರ್ಣಗೊಳಿಸದೆ ಹಣದ ಅಭಾವದಿಂದ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿರುವುದು (೩ ಕೊಠಡಿಗಳನ್ನು ಮಾತ್ರ ನಿರ್ಮಿಸಿ) ನಿಜವಲ್ಲವೇ ?

ಈ) ಹಾಗಿದ್ದಲ್ಲಿ ಮೂಲ ನಕ್ಷೆಯ ಪ್ರಕಾರ ಪೂರ್ಣಗೊಳಿಸಲು ಹಣವನ್ನು ತಕ್ಷಣ ಮಂಜೂರು ಮಾಡಲಾಗುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ನಿಜ.

ಆ) ನಿಜ.

ಇ) ಐದು ಕೊಣೆಗಳಂ ಪೂರ್ಣವಾಗಿದ್ದು ಒಂದು ಕೋಣೆ ಮತ್ತು ಕಾಂಪೌಡು ಮಾತ್ರ ಉಳಿದಿದೆ.

ಈ) ಇದಕ್ಕಾಗಿ ೧೯೮೬-೮೭ರಲ್ಲಿ ೧.೫೦ ಲಕ್ಷ ಹಣ ಒದಗಿಸಿದೆ.

ಕೋಲಾರ ಜಿಲ್ಲೆಯಲ್ಲಿ ಮಂಜೂರಾಗಿರುವ ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ಉಪಾಧ್ಯಾಯರ ಹುದ್ದೆಗಳ ಬಗ್ಗೆ.

೮೮೬. ಶ್ರೀ ಹೆಚ್. ಬಿ. ದ್ಯಾವೀರಪ್ಪ (ಮಾಲೂರು).—ಮಾನ್ಯ ಶಿಕ್ಷಣ ಮಂತ್ರಿಯಂವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ ?

ಅ) ಕೋಲಾರ ಜಿಲ್ಲೆಯಲ್ಲಿ ಮಂಜೂರಾಗಿರುವ ಪ್ರಾಥಮಿಕ ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಉಪಾಧ್ಯಾಯರ ಸಂಖ್ಯೆ ಎಷ್ಟು (ತಾಲ್ಲೂಕುವಾರು) ?

ಆ) ೧೯೮೬-೮೭ನೇ ವರ್ಷದಲ್ಲಿ ಕೆಲಸ ಮಾಡುತ್ತಿದ್ದ ಹಾಗೂ ಖಾಲಿ ಇದ್ದ ಉಪಾಧ್ಯಾಯರ ಹುದ್ದೆಗಳೆಷ್ಟು ?

ಇ) ಖಾಲಿ ಇರುವ ಹುದ್ದೆಗಳನ್ನು ಬರುವ ವರ್ಷ ಅಂದರೆ ೧೯೮೭-೮೮ ರಿಂದ ನೇಮಕಾತಿ ಮಾಡಲಾಗುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಸಂಖ್ಯೆ	ತಾಲ್ಲೂಕು	ಪ್ರಾಥಮಿಕ ಶಾಲೆ (ಮಾಧ್ಯಮಿಕ ಶಾಲೆ ಸೇರಿ)	ಪ್ರೌಢಶಾಲೆ ಉಪಾಧ್ಯಾಯರು
೧	ಕೋಲಾರ	೯೯೮	೧೪೬
೨	ಮುಳಬಾಗಿಲು	೬೨೫	೫೧
೩	ಬಂಗಾರಪೇಟೆ (ಕೆ ಜಿ.ಎಫ್. ಸೇರಿ)	೧೦೫೪	೧೦೯
೪	ಮಾಲೂರು	೫೬೯	೬೪
೫	ಶ್ರೀನಿವಾಸಪುರ	೫೯೧	೬೯
೬	ಚಿಂತಾಮಣಿ	೬೯೮	೧೩೫
೭	ಶಿಡ್ಲಘಟ್ಟ	೫೪೦	೮೨
೮	ಚಿಕ್ಕಬಳ್ಳಾಪುರ	೪೬೪	೬೨
೯	ಗೌರಿಬಿದನೂರು	೭೩೨	೧೧೨
೧೦	ಬಾಗೇಪಲ್ಲಿ	೪೪೩	೭೨
೧೧	ಗುಡಿಬಂಡೆ	೧೬೫	೪೪
		೬೭೯	೧೦೦೬

ಆ)	ಕೆಲಸ ಮಾಡಂತ್ರಿರಂವ ಉಪಾಧ್ಯಾಯರ	ಪ್ರಾಥಮಿಕ	ಪ್ರೌಢ	ಒಟ್ಟಿಗೆ
	ಹುದ್ದೆಗಳು	೬೫೬೮	೯೨೪	೭೪೯೨
	ಖಾಲಿ ಬಿದ್ದ ಉಪಾಧ್ಯಾಯರ ಹುದ್ದೆಗಳು.	೨೧೧	೮೨	೨೯೩

ಇ) ಸಂಬಂಧಪಟ್ಟ ಆಯ್ಕೆ ಸಮಿತಿಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ನಂತರ ಹುದ್ದೆಗಳನ್ನು ಭರ್ತಿಮಾಡಲಾಗುವುದು.

ಖಾಸಗಿ ಕಾಲೇಜುಗಳ ರಾಷ್ಟ್ರೀಕರಣ ಮಾಡುವ ಬಗ್ಗೆ.

೯೬೯. ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಖಾಸಗಿ ಶಾಲಾ ಕಾಲೇಜುಗಳನ್ನು ರಾಷ್ಟ್ರೀಕರಣ ಮಾಡುವ ಸಲಹೆ ಏನಾದರೂ ಸರಕಾರದವರಲ್ಲಿದೆಯೇ ?

ಆ) ಹಾಗಿದ್ದಲ್ಲಿ ಈ ಸಂಸ್ಥೆಗಳಿಗೆ ನೇಮಕಾತಿ ಜವಾಬ್ದಾರಿಯನ್ನು ಸರ್ಕಾರದವರು ವಹಿಸಿಕೊಳ್ಳುವರೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.